

**ಯೋಧರಿಗೆ ನಮನ...**

ಬೆಂಗಳೂರಿನಲ್ಲಿ ಶನಿವಾರ ನಡೆದ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸುವ ಸಮಾರಂಭದಲ್ಲಿ ರಾಜ್ಯಪಾಲ ಎಚ್.ಆರ್. ಭಾರದ್ವಾಜ್, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದ ರಾಜೀವ್ ಚಂದ್ರಶೇಖರ್, ಸುಭಾಷಿಣಿ ವಸಂತ್ ಉಪಸ್ಥಿತರಿದ್ದರು.



**ಸಮ್ಮೇಳನಕ್ಕೆ ಸಿದ್ಧತೆ...**

ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ವಿಶ್ವ ತುಳು ಸಮ್ಮೇಳನಕ್ಕೆ ಸಿದ್ಧತೆ ನಡೆಯುತ್ತಿರುವುದು.

■ ಕೃಷಿಗೆ ಬೇಕಾದ ಬಿತ್ತನೆ ಬೀಜ, ಗೊಬ್ಬರ, ವಿದ್ಯುತ್, ನೀರು ಈ ಎಲ್ಲಾ ಪ್ರಕ್ರಿಯೆಗಳಿಗೂ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕಾದರೆ ರೈತ ಸಮುದಾಯ ಒಗ್ಗಟ್ಟಾಗಿ ಹೋರಾಟ ಮಾಡಬೇಕಾಗಿದೆ -ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್

# ಕನ್ನಡ ವಿದ್ಯುನ್ಮಾನ ಜ್ಞಾನಕೋಶ 'ಕಣಜ' ಉದ್ಘಾಟನೆ

ಬೆಂಗಳೂರು, ಡಿ. 5: ಕರ್ನಾಟಕ ಜ್ಞಾನ ಆಯೋಗವು ಸಿದ್ಧಪಡಿಸಿದ ಕನ್ನಡ ವಿದ್ಯುನ್ಮಾನ ಜ್ಞಾನಕೋಶ 'ಕಣಜ'ವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಉದ್ಘಾಟಿಸಿದರು.

ವಿಧಾನಸೌಧದಲ್ಲಿ ನಡೆದ ಸಮಾರಂಭದಲ್ಲಿ 'ಕಣಜ' ಪೋರ್ಟಲ್‌ಗೆ ಚಾಲನೆ ನೀಡಿದ ಯಡಿಯೂರಪ್ಪ, ಇಡೀ ಜಗತ್ತಿನ ತಿಳುವಳಿಕೆ ಸಮಸ್ತ ಕನ್ನಡಿಗರಿಗೂ ಒದಗಬೇಕೆಂಬ ಆಶಯವನ್ನು ಹಿಂದಿನ ಮುಂಗಡ ಪತ್ರದಲ್ಲಿ ತಾವು ಮಂಡಿಸಿದ್ದು, ಅದೀಗ ನನಸಾಗಿದೆ ಎಂದರು.

ರಾಷ್ಟ್ರವೊಂದರಲ್ಲೇ ಮೊದಲ ಬಾರಿಗೆ ರಾಜ್ಯವೊಂದರ ಮಾತೃಭಾಷೆಯಲ್ಲಿ ಲಭ್ಯವಾಗುತ್ತಿರುವ ವಿದ್ಯುನ್ಮಾನ ಜ್ಞಾನಕೋಶ ಇದಾಗಿದೆ. ಕನ್ನಡ ನುಡಿಯ ಹಿರಿಮೆ, ಸಂಸ್ಕೃತಿಯ ಗರಿಮೆಯನ್ನು ಸಂರಕ್ಷಿಸಲು ಇದು ಪೂರಕ. ಕರ್ನಾಟಕವನ್ನು ಜ್ಞಾನ ಸಮಾಜವಾಗಿ ಪರಿವರ್ತಿಸಲು, ಕನ್ನಡ ನಾಡು ಹಾಗೂ ಭಾಷೆಯ ವಿಕಾಸದಲ್ಲಿ ಇದು ಮಹತ್ವದ ಕೊಡುಗೆ ಎಂದು ಬಣ್ಣಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಪೋರ್ಟಲ್ ಕೆಲಸ ಆರಂಭವಾಗಿದ್ದು, ಇದು ಇಲ್ಲಿಗೆ ನಿಲ್ಲುವುದಲ್ಲ. ಕಾಲಕಾಲಕ್ಕೆ ಅದನ್ನು ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಅನುದಾನ ಹಾಗೂ ಪೋರ್ಟಲ್ ಉಸ್ತುವಾರಿಗೆ ಸ್ವಾಯತ್ತ ಅಧಿಕಾರ ನೀಡುವಂತೆ ಕೋರಿದರು.

ಜ್ಞಾನ ಆಯೋಗದ ಅಧ್ಯಕ್ಷ ಡಾ| ಕೆ. ಕಸ್ತೂರಿರಂಗನ್ ಮಾತನಾಡಿ, ಪೋರ್ಟಲ್ ಆರಂಭ ಜ್ಞಾನ ಆಯೋಗದ ಹೆಮ್ಮೆಯ ಗರಿ. ಮಾಹಿತಿ ನೀಡುವಲ್ಲಿ ರಾಜ್ಯ ಸರ್ಕಾರ ಇಟ್ಟ ಮಹತ್ವದ ಹೆಜ್ಜೆ ಎಂದರು.

ಆಯೋಗವು ಈಗಾಗಲೇ 7 ಇಲಾಖೆಗಳಿಗೆ ಸಂಬಂಧಿಸಿದ 26 ಶಿಫಾರಸುಗಳನ್ನು ಸರ್ಕಾರಕ್ಕೆ ನೀಡಿದೆ. ಆ ಪೈಕಿ 9 ಶಿಫಾರಸುಗಳನ್ನು ಅನುಷ್ಠಾನ ಮಾಡಿರುವುದು ಸಮಾಧಾನಕರ ಸಂಗತಿ. ಏಕರೂಪ ಶೈಕ್ಷಣಿಕ ವೇಳಾಪಟ್ಟಿ, ಮಾದರಿ ವಿ.ವಿ.ಗಳು, ಇಂಟರ್‌ನೆಟ್ ಮೊಬೈಲ್ ವ್ಯಾನ್, ತರಬೇತಿ ಸಂಸ್ಥೆಗಳ ಸಬಲೀಕರಣ, ಇಂದಿರಾ ಪ್ರಿಯದರ್ಶಿನಿ ಗ್ರಂಥಾಲಯ, ಬಿ.ಎ. ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ಇವು ಅನುಷ್ಠಾನ ಆಗಿವೆ. ಇದಕ್ಕಾಗಿ ಆಯೋಗದ ಪರವಾಗಿ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಕುಲಪತಿ ಡಾ| ದೇ. ಜವರೇಗೌಡ, ಕನ್ನಡ ಅನುಷ್ಠಾನ ವರ್ಷ ಆಚರಿಸುತ್ತಿರುವಾಗಲೇ ಕನ್ನಡ ವಿದ್ಯುನ್ಮಾನ ಜ್ಞಾನಕೋಶ ಆರಂಭವಾಗಿರುವುದು ಸಾರ್ಥಕತೆ ತಂದಿದೆ. ಭಾಷೆ, ಸಾಹಿತ್ಯ ಅಭಿವೃದ್ಧಿಗಾಗಿ ದೇಶದ ಯಾವುದೇ ರಾಜ್ಯ ಸರ್ಕಾರಗಳು ನೀಡದಷ್ಟು ಅನುದಾನವನ್ನು ಯಡಿಯೂರಪ್ಪನವರ ಸರ್ಕಾರ ನೀಡುತ್ತಿದೆ ಎಂದು ಶ್ಲಾಘಿಸಿದರು.

ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್ ಪಾಲ್ಗೊಂಡಿದ್ದರು. ಆಯೋಗದ ಸದಸ್ಯ ಕಾರ್ಯದರ್ಶಿ ಡಾ| ಎಂ.ಕೆ. ಶ್ರೀಧರ್ ಸ್ವಾಗತಿಸಿದರು. ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್ ವಂದಿಸಿದರು.



ಕರ್ನಾಟಕ ಜ್ಞಾನ ಆಯೋಗ ರೂಪಿಸಿದ ವಿದ್ಯುನ್ಮಾನ ಜ್ಞಾನಕೋಶ 'ಕಣಜ'ಕ್ಕೆ ಮುಖ್ಯಮಂತ್ರಿ, ಯಡಿಯೂರಪ್ಪ ಬೆಂಗಳೂರಿನಲ್ಲಿ ಶನಿವಾರ ಚಾಲನೆ ನೀಡಿದರು. ಆಯೋಗದ ಅಧ್ಯಕ್ಷ ಡಾ| ಕೆ. ಕಸ್ತೂರಿ ರಂಗನ್, ದೇಜಗೌ, ಅರವಿಂದ ಲಿಂಬಾವಳಿ, ಮುಖ್ಯಮಂತ್ರಿ, ಚಂದ್ರು ಉಪಸ್ಥಿತರಿದ್ದರು.

# ಕೃಷಿ ಉತ್ಪನ್ನಕ್ಕೆ ಕೃಷಿಕನಿಂದಲೇ ಬೆಲೆ ನಿಗದಿ

## ರೈತ ತೀರ್ಪು ಆಗ್ರಹ

ಬೆಂಗಳೂರು, ಡಿ. 5: ರೈತರು ಬೆಳೆಯುವ ಉತ್ಪನ್ನಗಳಿಗೆ ರೈತರೇ ಬೆಲೆ ನಿಗದಿ ಮಾಡುವುದು ಸೇರಿದಂತೆ ಕೃಷಿಕರ ಹಲವಾರು ಸಮಸ್ಯೆಗಳಿಗೆ ರೈತ ನ್ಯಾಯ ಮಂಡಳಿ ನೀಡಿರುವ 'ರೈತ ತೀರ್ಪು' ಪರಿಹಾರ ಕಲ್ಪಿಸಿದೆ.

ನಗರ ಹೊರವಲಯದಲ್ಲಿ ಡಿ.1 ರಿಂದ 4ರವರೆಗೆ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ ಒಕ್ಕೂಟ ಆಯೋಜಿಸಿದ್ದ ರೈತ ನ್ಯಾಯಾಲಯ ಎಂಬ ಕಾರ್ಯಾಗಾರದಲ್ಲಿ ವ್ಯಕ್ತವಾದ ಅಭಿಪ್ರಾಯ ಹಾಗೂ ಪ್ರಮುಖ ವಿಚಾರಗಳ ಕುರಿತು ಇಂದು 'ರೈತ ತೀರ್ಪು' ನೀಡಲಾಯಿತು.

ಹಲವು ದಶಕಗಳಿಂದ ರೈತರನ್ನು ಕಾಡುತ್ತಿರುವ ಹಲವು ಸಮಸ್ಯೆಗಳಿಗೆ ರೈತ ನ್ಯಾಯಾಲಯದ ಕಾರ್ಯಾಗಾರದಲ್ಲಿ ಉತ್ತರ ಕಂಡುಹಿಡಿಯಲಾಗಿದ್ದು, ಅದರ ಭಾಗವಾಗಿ ಇಂದು ರೈತ ತೀರ್ಪು ಎಂಬ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಪ್ಪಿಕೋ ಚಳವಳಿಕೆಯ ಪಾಂಡುರಂಗ ಹೆಗಡೆ ತಿಳಿಸಿದರು.

ಎಲ್ಲಾ ಪದಾರ್ಥಗಳಿಗೂ ಉತ್ಪಾದಕರೇ ಬೆಲೆ ನಿಗದಿ ಮಾಡುತ್ತಾರೆ. ಅದೇ ರೀತಿ ಕೃಷಿಕರು ಬೆಳೆಯುವ ಉತ್ಪನ್ನಗಳಿಗೂ ಕೃಷಿಕನೇ ಬೆಲೆ ನಿಗದಿ ಮಾಡುವ ಯೋಜನೆ ಇಂದಿನಿಂದಲೇ ಜಾರಿಯಾಗಬೇಕೆಂದು ರೈತ ತೀರ್ಪಿನಲ್ಲಿ ತಿಳಿಸಲಾಯಿತು.

ರೈತ ತೀರ್ಪು ಕಾರ್ಯಾಗಾರದಲ್ಲಿ ರೈತ ನ್ಯಾಯ ಮಂಡಳಿಯ ಸದಸ್ಯರಾಗಿ ದಲಿತರು, ಬುಡಕಟ್ಟು ಜನಾಂಗದವರು, ದನಿ ವಂಚಿತರು ಹಾಗೂ ಸಣ್ಣ ರೈತರು ಪಾಲ್ಗೊಂಡಿದ್ದರು. ಅವರೆಲ್ಲರೂ ಅನುಭವಿಸಿರುವ ತೊಂದರೆ, ಅವರ ಅಭಿಪ್ರಾಯ ಹಾಗೂ ಅವುಗಳಿಗೆ ಪರಿಹಾರ ನೀಡಲು ರೈತ ತೀರ್ಪು ಸೂಕ್ತ ವೇದಿಕೆಯಾಗಿದೆ ಎಂದು ಪಾಂಡುರಂಗ ಹೆಗಡೆ ಅಭಿಪ್ರಾಯಪಟ್ಟರು.

ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ಸಮನ್ವಯ-ಆದರ್ಶ ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ರೈತ ನ್ಯಾಯಾಲಯ ಪ್ರಾರಂಭಿಸಲಾಗಿದೆ. ಮೊದಲ ಪ್ರಯತ್ನದಲ್ಲಿ ಈ ಯೋಜನೆ ಯಶಸ್ಸುಗಳಿಸಿದೆ. ಈ ಪ್ರಕ್ರಿಯೆ ನಿರಂತರವಾಗಿ ನಡೆಯಲಿದೆ ಎಂದರು.

ರೈತ ನ್ಯಾಯ ಮಂಡಳಿಯ ವೀಕ್ಷಣಾ ಸಮಿತಿ ಸದಸ್ಯರಾಗಿ ಡಾ| ಎಚ್. ಸುದರ್ಶನ್ ಮಾತನಾಡಿ, ರೈತ ತೀರ್ಪು ಕಾರ್ಯಾಗಾರ ನಿಜಕ್ಕೂ ಕೃಷಿಕರಿಗೆ ಸಂಜೀವಿನಿಯಾಗಿದೆ. ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಂತೆ ಮಾಡುವ ಉದ್ದೇಶದಿಂದ ರಚಿತವಾಗಿರುವ ಈ ರೈತ ನ್ಯಾಯಾಲಯ ಮುಂದಿನ ದಿನಗಳಲ್ಲಿ ಯಶಸ್ವಿಯಾಗಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್ ಮಾತನಾಡಿ, ಕೃಷಿಗೆ ಬೇಕಾದ ಬಿತ್ತನೆ ಬೀಜ, ಗೊಬ್ಬರ, ವಿದ್ಯುತ್, ನೀರು ಈ ಎಲ್ಲಾ ಪ್ರಕ್ರಿಯೆಗಳಿಗೂ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕಾದರೆ ರೈತ ಸಮುದಾಯ ಒಗ್ಗಟ್ಟಾಗಿ ಹೋರಾಟ ಮಾಡಬೇಕಾಗಿದೆ ಎಂದರು.

ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ರೈತ ನ್ಯಾಯಾಲಯದ ಮೆಚ್ಚುಗೆ ವ್ಯಕ್ತಪಡಿಸಿದರು.

ರೈತ ಮುಖಂಡರಾದ ಸುನಂದ ಜಯರಾಂ, ಚನ್ನಬಸಪ್ಪ ಕೊಂಬಳಿ, ಡಾ| ಹಿರೇಗೌಡರ್, ಡಾ| ಪ್ರಕಾಶ್ ಭಟ್, ಸಂತೋಷ್ ಕೌಲಗಿ, ಕುರುಬೂರು ಶಾಂತಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿ, ರೈತ ತೀರ್ಪು ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.

# ಶೋಭಾಗೆ ಯಾಕೆ ಈ ಉಸಾಬರಿ: ಬೇಳೂರು ಪ್ರಶ್ನೆ

## ಸಿಎಂ ಬೇಕಾದ್ರೆ ನಕ್ಸಲ್ ನಿಗಮದ ಅಧ್ಯಕ್ಷೆ ಮಾಡಲಿ

ಹೊಸನಗರ, ಡಿ. 5: ಮಾಜಿ ಸಚಿವೆ ಶೋಭಾ ಕರಂದ್ಲಾಜೆ ಅಧಿಕಾರದಲ್ಲಿದ್ದಾಗ ಇಲ್ಲದ ಕಾಳಜಿ ಈಗೇಕೆ? ನಕ್ಸಲ್ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿಯೇ ವಾಸ್ತವ್ಯ ಹೂಡಿದ ಬಗ್ಗೆ ಬಿ.ಎಸ್. ರಿಗ್ಯಾಕೆ ಈ ಉಸಾಬರಿ? ಸಚಿವರಾಗಿದ್ದಾಗ ಸಮಸ್ಯೆಗಳಿಗೆ ಸ್ಪಂದಿಸದೆ ಅಧಿಕಾರ ಕಳೆದು ಕೊಂಡ ಮೇಲೆ ಈಗ ಅನುಕಂಪ ವ್ಯಕ್ತಪಡಿಸಬೇಕಾ ಎಂದು ಪ್ರಶ್ನಿಸಿದ ಬೇಳೂರು ಗೋಪಾಲಕೃಷ್ಣ, ಆಯಾ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸಲು ಅಲ್ಲಿಯ ಶಾಸಕರು ಇರುತ್ತಾರೆ. ಮೂಗು ತೂರಿಸಲು ಇವರ್ಯಾರು? ಬೇಕಾದ್ರೆ ಯಡ್ಯೂರಪ್ಪ ನಕ್ಸಲ್ ನಿಗಮ ರಚಿಸಿ ಅವರನ್ನು ಅಧ್ಯಕ್ಷೆಯನ್ನಾಗಿ ಮಾಡಲಿ ಎಂದು ಬೇಳೂರು ಸಲಹೆ ನೀಡಿದರು. ಶೋಭಾ ಮತ್ತೊಮ್ಮೆ ಜನತೆಯ ಅನುಕಂಪ ಪಡೆಯಲು ನಾಯಕತ್ವ ರೂಪಿಸಿಕೊಳ್ಳಲು ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದಾರೆ. ಈ ಕಾಳಜಿ ಸಚಿವೆಯಾಗಿದ್ದಾಗ ಯಾಕೆ ಬರಲಿಲ್ಲ ಎಂದು ಅವರು ಪ್ರಶ್ನಿಸಿದರು.

**ಇನ್ನೊಂದು ಬಾಂಬ್:** ದೀಪಾವಳಿ ಅಮಾವಾಸ್ಯೆಗೆ ಮುನ್ನ ಬಾಂಬ್ ಸಿಡಿಸುವ ಮುನ್ಸೂಚನೆ ನೀಡಿದ್ದ ಶಾಸಕ ಬೇಳೂರು, ರೆಡ್ಡಿ ಸಹೋದರರೊಂದಿಗೆ ಸೇರಿ ತಮ್ಮ ಬಣದ ಶಕ್ತಿ ಪ್ರದರ್ಶಿಸಿದ್ದು, ಈ ಬಾರಿ ಎಳ್ಳಮಾವಾಸ್ಯೆಗೆ ಮುನ್ನ ಇನ್ನೊಂದು ಬಾಂಬ್ ಸಿಡಿಸುವ ಬಗ್ಗೆ ಸೂಚನೆ ನೀಡಿದ್ದು, ಯಾವ ಬಗ್ಗೆ ಎಂದು ಪ್ರಶ್ನಿಸಿದ ಪತ್ರಕರ್ತರಿಗೆ ಇದು ರಾಜಕೀಯ, ಕಾದು ನೋಡಿ. ಅದು ಈ ಹಿಂದಿನಕ್ಕಿಂತ 'ಶಾಕ್ ನ್ಯೂಸ್' ಆಗಲಿದೆ ಎಂದರು.

ಸಚಿವ ಪದವಿಯ ಆಕಾಂಕ್ಷಿಯಾ ಎಂದು ಕೇಳಿದ್ದಕ್ಕೆ, ನಾನೇನು ಅಧಿಕಾರ ದಾಹಿಯಲ್ಲ. ಸನ್ಯಾಸಿಯೂ ಅಲ್ಲ. ಪದವಿ ಸಿಕ್ಕಿದ್ದಲ್ಲಿ ನಿಭಾಯಿಸುವ ಶಕ್ತಿ ನನ್ನಲ್ಲಿದೆ. ಹೊಸನಗರ ಭಾಗಕ್ಕೆ ಈ ವರೆಗೂ ಯಾವುದೇ ಪ್ರತಿನಿದಿಗಳಿಗೆ ಉನ್ನತ ಪದವಿ, ಸಚಿವ ಹುದ್ದೆ ಸಿಕ್ಕಿಲ್ಲ. ಆ ಯೋಗ ಈಗ ಬರಲೂಬಹುದು. ಯಾವುದಕ್ಕೂ ಕಾದು ನೋಡಿ ಎಂದರು.

# ಸಿಬಿಐ ತನಿಖೆ ಅಗತ್ಯ ಇಲ್ಲ, ಸಹಕಾರಕ್ಕೆ ಸಿದ್ಧ

ಬೆಂಗಳೂರು, ಡಿ. 5: ಅಕ್ರಮ ಗಣಿಗಾರಿಕೆ ಕುರಿತು ಸಿಬಿಐ ತನಿಖೆಗೆ ಶಿಫಾರಸು ಮಾಡುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿರುವ ಬಿಜೆಪಿ, ಈ ಕುರಿತು ಮೊದಲು ಹೇಳಿದ್ದಂತೆ ಕೇಂದ್ರಕ್ಕೆ ಅಗತ್ಯ ಮಾಹಿತಿ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದೆ.

ಕೇವಲ ಪ್ರತಿಪಕ್ಷಗಳನ್ನು ತೃಪ್ತಿಪಡಿಸಲು ಸಿಬಿಐ ತನಿಖೆಗೆ ಶಿಫಾರಸು ಮಾಡುವ ಅಗತ್ಯವಿಲ್ಲ. ಅಂತಹ ಸಂದರ್ಭವೂ ಎದುರಾಗಿಲ್ಲ ಎಂದು ರಾಜ್ಯ ಬಿಜೆಪಿ ವಕ್ತಾರ ವಿ. ಧನಂಜಯ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಇಂದು ಸ್ಪಷ್ಟಪಡಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಹೊಸದಾಗಿ ಯಾವುದೇ ಗಣಿಗಾರಿಕೆ ಪರವಾನಗಿ ನೀಡಿಲ್ಲ. ಆದರೂ, ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ಈ ವಿಚಾರದಲ್ಲಿ ಕೇಂದ್ರಕ್ಕೆ ಅಗತ್ಯವಾದ ಎಲ್ಲ ಮಾಹಿತಿಗಳನ್ನು ಒದಗಿಸಲು ಸಿದ್ಧವಿದೆ ಎಂದರು.

ಲೋಕಾಯುಕ್ತರು ಈ ಕುರಿತು ತನಿಖೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಮತ್ತೊಂದು ತನಿಖೆಯ ಅಗತ್ಯ ಅಥವಾ ಅನಿವಾರ್ಯತೆಯಾದರೂ ಏನಿದೆ? ಎಂದು ಪ್ರಶ್ನಿಸಿದ ಅವರು, ಲೋಕಾಯುಕ್ತ ಅಂತಿಮ ವರದಿ ಬಂದ ನಂತರ ಶಿಫಾರಸು ಆಧರಿಸಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

**ಹೆಚ್ಚು ಸ್ಥಾನ ಖಚಿತ:** ಸ್ಥಳೀಯ ಸಂಸ್ಥೆಗಳಿಂದ ಡಿ. 18ರಂದು ಮೇಲ್ಮನೆಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳು ಸಿಗುವುದು ಖಚಿತ ಎಂದು ಧನಂಜಯ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದು, ಅಭಿವೃದ್ಧಿ ವೇಗ ಹೆಚ್ಚಿಸಿದೆ. ಮೂಲಸೌಕರ್ಯಕ್ಕೆ ಹೆಚ್ಚು ಒತ್ತು ನೀಡಿದೆ. ಇದನ್ನು ಗಮನಿಸಿರುವ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಲಿದ್ದಾರೆ. ಬಿಜೆಪಿ ಸ್ಥಳೀಯ ಸಂಸ್ಥೆಗಳಿಂದ ಪ್ರಸ್ತುತ 4 ಸದಸ್ಯ ಬಲ ಹೊಂದಿದ್ದು, ಖಂಡಿತವಾಗಿ ಈ ಚುನಾವಣೆಯಲ್ಲಿ ಮೇಲ್ಮನೆಯಲ್ಲಿ ಪಕ್ಷದ ಪ್ರಾಬಲ್ಯ ಹೆಚ್ಚಲಿದೆ ಎಂದರು.

ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು, ಬಿಜೆಪಿಯನ್ನು ಸೋಲಿಸುವ ಉದ್ದೇಶದಿಂದ ಈ ಮೈತ್ರಿ ಎಂದು ಪ್ರತಿಪಾದಿಸುತ್ತಿವೆ. ಇದೊಂದು ನಕಾರಾತ್ಮಕ ಧೋರಣೆಯಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್ 18 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಆದರೆ, ಕೆಪಿಸಿಸಿ ಅಧ್ಯಕ್ಷರು ತಾವು 20 ಕ್ಷೇತ್ರಗಳಲ್ಲಿ ಗೆಲ್ಲುವುದಾಗಿ ಹೇಳಿಕೆ ನೀಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದ ಅವರು, ಕಾಂಗ್ರೆಸ್ ಈ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದರು.

ನಗರ ಘಟಕದ ವಕ್ತಾರ ಪ್ರಕಾಶ್ ಉಪಸ್ಥಿತರಿದ್ದರು.



ಸಮನ್ವಯ ಸಂಸ್ಥೆಯು ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ 'ರೈತ ತೀರ್ಪು' ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಡಾ|ಗೋಪಾಲ್ ಕಡೆಕುಡಿ ಮೊದಲಾದವರು ಪಾಲ್ಗೊಂಡಿದ್ದರು.

# ಹಿಂದಿ ಸಮಿತಿಗೆ ಡಾ| ಪ್ರಭಾಶಂಕರ್



ಬೆಂಗಳೂರು, ಡಿ. 5: ಪ್ರಧಾನಿ ಅಧ್ಯಕ್ಷರಾಗಿರುವ ಕೇಂದ್ರೀಯ ಹಿಂದಿ ಸಮಿತಿಯ ಸದಸ್ಯರಾಗಿ ಬೆಂಗಳೂರು ವಿ.ವಿ.ಯ ನಿವೃತ್ತ ಹಿಂದಿ ಪ್ರಾಧ್ಯಾಪಕ ಡಾ| ಟಿ.ಜಿ. ಪ್ರಭಾಶಂಕರ್ ಪ್ರೇಮಿ ನೇಮಕವಾಗಿದ್ದಾರೆ.

ಕರ್ನಾಟಕದಿಂದ ಈ ಗೌರವಕ್ಕೆ ಪಾತ್ರವಾಗಿರುವ ಏಕೈಕ ಸದಸ್ಯ ಇವರಾಗಿದ್ದಾರೆ. ಮೂಲತಃ ತುಮಕೂರಿನವರಾದ ಪ್ರಭಾಶಂಕರ್ ಕನ್ನಡ ಮತ್ತು ಹಿಂದಿಯಲ್ಲಿ 40 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅನುಭವ ಮಂಟಪ, ಬಸವ ಸಾಹಿತ್ಯ, ವಡ್ಡರಾಧನಾ, ಶರಣ ತತ್ವ ವಿವೇಚನೆ, ಅಕ್ಕಮಹಾದೇವಿ, ಜಗಜ್ಯೋತಿ ಬಸವಣ್ಣ, ಬಸವಣ್ಣಾಕೇ 108 ವಚನ್, ಮಡಿವಾಳ ಮಾಚಿದೇವ ಮೊದಲಾದ ಕೃತಿಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಹಿಂದಿಯಿಂದ ಅನೇಕ ಕೃತಿಗಳನ್ನು ಕನ್ನಡಿಸಿದ್ದಾರೆ.

ಹಿಂದಿ ಕೇಂದ್ರೀಯ ಸಮಿತಿಯು ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳಲ್ಲಿ ಹಿಂದಿಯನ್ನು ಅಧಿಕೃತವಾಗಿ ಹಾಗೂ ಸಮರ್ಥವಾಗಿ ಬಳಸುವ ಬಗ್ಗೆ ವಿವಿಧ ಕಾರ್ಯಚಟುವಟಿಕೆಯನ್ನು ನಡೆಸುತ್ತಿದೆ.

# ಆಯೋಗದಿಂದ ಮಾರ್ಗಸೂಚಿ ನಿರೀಕ್ಷಿಸುತ್ತಿರುವ ಸರ್ಕಾರ

## ನಾಗರಿಕರ ಗುರುತಿನ ಚೀಟಿ ಯೋಜನೆ

ಬೆಂಗಳೂರು, ಡಿ. 5: ರಾಜ್ಯದಲ್ಲಿ ನಾಗರಿಕರ ಗುರುತಿನ ಚೀಟಿ ಯೋಜನೆ ಜಾರಿಗೆ ಆಯೋಗದಿಂದ ಮಾರ್ಗಸೂಚಿಗಳನ್ನು ಎದುರು ನೋಡುತ್ತಿರುವುದಾಗಿ ಸಂಚಾಲಕರಾಗಿ ನೇಮಕವಾಗಿರುವ ಇ-ಆಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎನ್. ವಿದ್ಯಾಶಂಕರ್ ಅವರು ತಿಳಿಸಿದ್ದಾರೆ.

ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಂದನ ನಿಲೇಕಣಿ ಅವರು ಅಧ್ಯಕ್ಷರಾಗಿರುವ ರಾಷ್ಟ್ರೀಯ ನಾಗರಿಕರ ಗುರುತಿನ ಚೀಟಿ ಪ್ರಾಧಿಕಾರ ಇನ್ನೂ ಮಾರ್ಗಸೂಚಿಗಳನ್ನು ಅಂತಿಮಗೊಳಿಸಿಲ್ಲ ಎಂದರು.

ಯೋಜನೆಯನ್ನು ಪ್ರಾಯೋಗಿಕವಾಗಿ ರಾಜ್ಯದ ಮೂಲಕವೇ ಜಾರಿಗೆ ತರಲಾಗುತ್ತದೆ. ಕಳೆದ ಜುಲೈನಲ್ಲಿ ನಂದನ ನಿಲೇಕಣಿ ಅವರು ಬಂದು ಸಭೆ ಮಾಡಿ ಹೋದರು. ಆಗ ಅವರು ಮಾರ್ಗಸೂಚಿಗಳನ್ನು ರೂಪಿಸುವ ಕಾರ್ಯ ಸ್ವಲ್ಪ ತಡವಾಗುತ್ತದೆ ಎಂಬ ಮಾತು ಹೇಳಿದ್ದರು ಎಂದರು.

ಬಹುತೇಕ ಈಗ ಮಾರ್ಗಸೂಚಿಗಳು ಅಂತಿಮವಾಗುವ ಹಂತದಲ್ಲಿವೆ. ಜನವರಿ ಎರಡನೇ ವಾರದಲ್ಲಿ ನಮಗೆ ತಲುಪುವ ಸಾಧ್ಯತೆ ಇದ್ದು, ಮಾರ್ಗಸೂಚಿಗಳು ಬಂದ ಕೂಡಲೇ ಯಾವ ರೀತಿಯಲ್ಲಿ ಜಾರಿಗೆ ತರುವ ಕಾರ್ಯ ಆರಂಭಿಸಲಾಗುವುದು ಎಂದು ಹೇಳಿದರು.

# ಇ-ಆಡಳಿತಕ್ಕೆ ಇಲಾಖೆಗಳ ಜೋಡಣೆ: ಡಿ. 7ಕ್ಕೆ 'ಕೇಸ್ವಾನ್'ಗೆ ಚಾಲನೆ

ಬೆಂಗಳೂರು, ಡಿ. 5: 'ಸಂಪರ್ಕದಲ್ಲಿ ಸರ್ಕಾರ' ಎಂಬ ಉದ್ದೇಶದೊಂದಿಗೆ ರಾಜ್ಯ ಮಟ್ಟದಿಂದ ತಾಲೂಕು ಮಟ್ಟದ ತನಕ ವಿವಿಧ ಇಲಾಖೆಗಳನ್ನು ಇ-ಆಡಳಿತದಲ್ಲಿ ಜೋಡಣೆ ಮಾಡುವ ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆ (ಕೇಸ್ವಾನ್) ಡಿ. 7ರಂದು ಉದ್ಘಾಟನೆಯಾಗಲಿದೆ.

ರಾಜ್ಯ ಸರ್ಕಾರವು ಇ-ಆಡಳಿತ ಕೇಂದ್ರದ ಮೂಲಕ ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಗೆ 180 ಕೋಟಿ ರೂ.ಗಳು ವೆಚ್ಚವಾಗುತ್ತಿವೆ. ಸಾರ್ವಜನಿಕ ಸಹಭಾಗಿತ್ವದಲ್ಲಿ ಈ ಯೋಜನೆ ಜಾರಿಗೆ ಬರುತ್ತಿದೆ.

ಸೋಮವಾರ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅವರನ್ನು ಅಭಿನಂದಿಸುವ ಮೂಲಕ ಯೋಜನೆ ಚಾಲನೆ ಪಡೆದುಕೊಳ್ಳಲಿದೆ. ನಂತರ ರಾಜ್ಯಪಾಲರು ಎಲ್ಲಾ ಜಿಲ್ಲಾಧಿಕಾರಿಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಅದೇ ರೀತಿಯಲ್ಲಿ ಮುಖ್ಯಮಂತ್ರಿಗಳು ಸಹ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆ ಚರ್ಚೆ ನಡೆಸಲಿದ್ದಾರೆ.

ಯೋಜನೆಯ ಕುರಿತು ಇಂದು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಂ.ಎನ್. ವಿದ್ಯಾಶಂಕರ್ ಅವರು, ಬೇರೆ ರಾಜ್ಯಗಳಲ್ಲಿ ಈ ಯೋಜನೆ ಜಾರಿಯಲ್ಲಿದ್ದರೂ ಸಹ ನಮ್ಮ ರಾಜ್ಯದಲ್ಲಿ ಸಾಕಷ್ಟು ವಿಶೇಷತೆಗಳನ್ನು ಒಳಗೊಂಡಿದೆ ಎಂದರು.

ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಯೋಜನೆಯ ಸಲಹೆಗಾರರಾಗಿದ್ದಾರೆ. ಯುನೈಟೆಡ್ ಟೆಲಿಕಾಮ್ ಜಾಲದ ಸ್ಥಾಪನೆ ಮತ್ತು ನಿರ್ವಹಣೆ ಮಾಡುತ್ತದೆ. ಬಿಎಸ್‌ಎನ್‌ಎಲ್‌ನ ಬ್ರಾಡ್‌ವಿಡ್ತ್ ಪಡೆಯಲಾಗಿದೆ. ಕೆಪಿಎಂಜಿ ಥರ್ಡ್‌ಪಾರ್ಟಿ ಆಡಿಟ್ ಮಾಡಲಿದೆ ಎಂದರು.

> ಈ ಯೋಜನೆಯಿಂದ ಯಾವುದೇ ಸಂಪರ್ಕ ವೇಗವಾಗಿ ಆಗುತ್ತದೆ. ನೆಟ್‌ವರ್ಕ್ ಡೌನ್ ಆಗಿದೆ ಎಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಡಿಸಿಗಳು ಬೆಂಗಳೂರಿಗೆ ಬರುವ ಅಗತ್ಯವಿಲ್ಲ. ಯೋಜನೆಯ 180 ಕೋಟಿ ರೂ.ಗಳಲ್ಲಿ ಕೇಂದ್ರದ ಪಾಲು ಶೇ. 49ರಷ್ಟು ಹಾಗೂ ರಾಜ್ಯದ ಪಾಲು ಶೇ. 51ರಷ್ಟು

ಅತ್ಯಂತ ಸಮರ್ಥ, ನಿಖರ ಮತ್ತು ರಕ್ಷಣಾತ್ಮಕವಾದ ಸಂವಹನ ಕ್ರಿಯೆಯನ್ನು ಎಲ್ಲಾ ಮಟ್ಟದಲ್ಲಿಯೂ ಸ್ಥಾಪಿಸಲಾಗುತ್ತದೆ. ಮಾಹಿತಿ, ಧ್ವನಿ ಮತ್ತು ವಿಡಿಯೋ ಸೇವೆಗಳನ್ನು ನೀಡಲಾಗುತ್ತದೆ. ರಾಜ್ಯದ ಎಲ್ಲಾ ಇ-ಆಡಳಿತ ಅಪ್ಲಿಕೇಷನ್‌ಗಳಿಗೆ ಸಂಪರ್ಕ ನೀಡಲಾಗುತ್ತದೆ. ರಾಜ್ಯವ್ಯಾಪಿ ವಿಡಿಯೋ ಕಾನ್ಫರೆನ್ಸ್ ಸೌಲಭ್ಯ ಒದಗಿಸಲಾಗುತ್ತದೆ ಎಂದು ವಿವರಿಸಿದರು.

ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಗಣಕ ಪ್ರಕ್ರಿಯೆಗೆ ಅನುಕೂಲ ಮಾಡಲಿ ಸರ್ಕಾರದ ಬ್ಯುಸಿನೆಸ್ ಸೆಂಟರ್ ಮತ್ತು ಐಟಿ ಸರ್ವರ್ ರೂಂಗಳನ್ನು ಸ್ಥಾಪನೆ ಮಾಡಲಾಗುತ್ತದೆ. ಈ ಯೋಜನೆಯಿಂದ ಸರ್ಕಾರಿ ಕಚೇರಿಗಳ ಕಡತಗಳ ಸ್ವೀಕೃತಿ, ರವಾನೆ ಅನುಕೂಲ ವಾಗುತ್ತದೆ. ಆನ್‌ಲೈನ್ ಮೂಲಕ ಸೇವೆ ನಡೆಯಲಿದೆ ಎಂದರು.

ಈಗ 70 ಇಲಾಖೆಗಳ 2300 ಕಚೇರಿಗಳಿಗೆ ಈ ಯೋಜನೆಯ ಸಂಪರ್ಕ ಕಲ್ಪಿಸಲಾಗಿದೆ. ಮುಂದೆ 3 ಸಾವಿರ ಕಚೇರಿಗಳಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಪ್ರತಿ ಕಚೇರಿಗೆ ಐಪಿ ಫೋನ್ ನೀಡಲಾಗುತ್ತದೆ. ಇದು ಶುಲ್ಕರಹಿತ ದೂರವಾಣಿ ಸೇವೆಯಾಗಿದೆ. ಪ್ರತಿ ಕಚೇರಿಗಳೂ ಜಿಲ್ಲಾ ಮಟ್ಟದಿಂದ ತಾಲೂಕು ಮಟ್ಟದ ತನಕ ಸಭೆಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಬಹುದಾಗಿದೆ. ಇದಲ್ಲದೇ ಮೊಬೈಲ್ ವಿಡಿಯೋ ಕಾನ್ಫರೆನ್ಸ್ ವಾಹನಗಳು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ತಲಾ ಒಂದೊಂದು ಇರುತ್ತವೆ ಎಂದರು.

ಎಲ್ಲಾ ಜಿಲ್ಲಾ ಕೋರ್ಟ್‌ಗಳಿಂದ ಜಿಲ್ಲಾ ಕಾರಗೃಹದಲ್ಲಿ ವಿಡಿಯೋ ಕಾನ್ಫರೆನ್ಸ್ ನಡೆಸಲು ಅವಕಾಶ ಮಾಡಿಕೊಡಲಾಗಿದೆ. ಪ್ರತಿ ತಾಲೂಕಿನಲ್ಲಿ ಬ್ಯುಸಿನೆಸ್ ಸೆಂಟರ್ ಸ್ಥಾಪಿಸಿ ಅಲ್ಲಿ ಸೌಲಭ್ಯ ಒದಗಿಸಲಾಗುತ್ತದೆ. ಗಣಕಯಂತ್ರ ಇಲ್ಲದ ಕಚೇರಿಗಳು ಈ ಕೇಂದ್ರದಲ್ಲಿ ಸೌಲಭ್ಯ ಪಡೆಯಬಹುದಾಗಿದೆ ಎಂದರು.

ರಾಜ್ಯ ಮಟ್ಟದಲ್ಲಿ ರಾಜಭವನ, ಮುಖ್ಯಮಂತ್ರಿ ಗೃಹ ಕಚೇರಿ, ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಹೈಕೋರ್ಟ್, ಕೇಂದ್ರ ಕಾರಾಗೃಹ, ಅರಣ್ಯ ಭವನದಲ್ಲಿ ನಿಯಂತ್ರಣ ಕೊಠಡಿ ಸ್ಥಾಪನೆ ಮಾಡಲಾಗುತ್ತದೆ. ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿಯೂ ಇದೇ ರೀತಿಯಲ್ಲಿ ಸೌಲಭ್ಯ ನೀಡಲಾಗುತ್ತದೆ ಎಂದು ತಿಳಿಸಿದರು.

ಈ ಯೋಜನೆಯಿಂದ ಯಾವುದೇ ಸಂಪರ್ಕ ವೇಗವಾಗಿ ಆಗುತ್ತದೆ. ನೆಟ್‌ವರ್ಕ್ ಡೌನ್ ಆಗಿದೆ ಎಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಡಿಸಿಗಳು ಬೆಂಗಳೂರಿಗೆ ಬರುವ ಅಗತ್ಯವಿಲ್ಲ. ಯೋಜನೆಯ 180 ಕೋಟಿ ರೂ.ಗಳಲ್ಲಿ ಕೇಂದ್ರದ ಪಾಲು ಶೇ.49ರಷ್ಟು ಹಾಗೂ ರಾಜ್ಯದ ಪಾಲು ಶೇ.51ರಷ್ಟು ಎಂದರು.

# ಜಾತವಾರ ಕೆರೆಗೆ ಅಪರೂಪದ ಅತಿಥಿಗಳು



ಶಿಡ್ಲಘಟ್ಟ, ನ. 5: ಸೈಬೀರಿಯಾದಿಂದ ವಲಸೆ ಬಂದಿರುವ ದಾಸ ಕೊಕ್ಕರೆ ಹಕ್ಕಿಗಳು ಸಾರ್ವಜನಿಕರನ್ನು ಆಕರ್ಷಿಸುತ್ತಿವೆ.

ಶಿಡ್ಲಘಟ್ಟ- ಚಿಕ್ಕಬಳ್ಳಾಪುರ ಮಾರ್ಗದಲ್ಲಿರುವ ಜಾತವಾರ ಗ್ರಾಮದ ಕೆರೆ ಅಂಗಳದಲ್ಲಿ ಪ್ರತ್ಯಕ್ಷವಾಗಿರುವ ಈ ಹಕ್ಕಿಗಳು ಗ್ರಾಮಸ್ಥರು ಮತ್ತು ನೋಡುಗರನ್ನು ಕೈಬೀಸಿ ಕರೆಯುತ್ತಿವೆ. ಬಿಳಿ ಬಣ್ಣದ ಕಾಲುಗಳು, ನೀಳ ಕುತ್ತಿಗೆ, ಹಳದಿಗೆಂಪು ತಲೆ ಮತ್ತು ಬಾಗಿದ ಕೊಕ್ಕು, ಕಪ್ಪು ಗೀರುಗಳುಳ್ಳ ರೆಕ್ಕೆ ಉಳ್ಳ ಈ ಹಕ್ಕಿಗಳು ನೋಡುವುದಕ್ಕೆ ಸುಂದರವಾಗಿ ಕಾಣಿಸುತ್ತಿವೆ.

ಒಂಟಿಯಾಗಿ ಅಥವಾ ಜೋಡಿ ಜೋಡಿಯಾಗಿ ಹಳ್ಳ, ಗದ್ದೆ ಮತ್ತು ಜೌಗು ಪ್ರದೇಶಗಳಲ್ಲಿ ಆಹಾರ ಹುಡುಕಿಕೊಂಡು ಇವು ಓಡಾಡುತ್ತಿರುವ ದೃಶ್ಯ ಮನಮೋಹಕ. ಸಾಮಾನ್ಯವಾಗಿ ಆಗಸ್ಟ್‌ನಿಂದ ಜನವರಿವರೆಗೆ ಮೊಟ್ಟೆ ಇಟ್ಟು ಮರಿ ಮಾಡುವ ಹಕ್ಕಿಗಳು ಮರದಲ್ಲಿ ಹಲವಾರು ಗೂಡುಗಳನ್ನು ಕಟ್ಟಿಕೊಂಡಿರುತ್ತವೆ ಎನ್ನುತ್ತಾರೆ ಹವ್ಯಾಸಿ ಛಾಯಾಗ್ರಾಹಕ ಡಿ.ಜೆ. ಮಲ್ಲಿಕಾರ್ಜುನ್.

ದೂರ ದೇಶದಿಂದ ಮರಿ ಮಾಡಲು ಬಂದಿರುವ ಹಕ್ಕಿಗಳನ್ನು ಗ್ರಾಮಸ್ಥರು ಕುತೂಹಲದಿಂದ ವೀಕ್ಷಿಸುತ್ತಿದ್ದಾರೆ. ಇದು ಯಾವ ಜಾತಿಯ ಹಕ್ಕಿ ಎಂಬುದರ ಅರಿವು ಗ್ರಾಮಸ್ಥರಿಗೆ ಇಲ್ಲದಿದ್ದರೂ ಆ ಪಕ್ಷಿಗಳನ್ನು ಕಂಡು ಸಂಭ್ರಮಪಡುತ್ತಿದ್ದಾರೆ.